ಆರ್ಟ್ ಗ್ಯಾಲರಿಯೊಂದರಲ್ಲಿ ಅಪರೂಪದ ಪಕ್ಷಿಗಳ ಛಾಯಾಚಿತ್ರ ಪ್ರದರ್ಶನ. ವೀಕ್ಷಕರು ಫೋಟೊಗಳನ್ನು ತದೇಕಚಿತ್ತದಿಂದ ನೋಡುತ್ತ ಮೆಲುದನಿಯಲ್ಲಿ ಮೆಚ್ಚುಗೆ ಸೂಚಿಸುತ್ತಿದ್ದರು. ಅಲ್ಲಿಯೇ ಇದ್ದ ಉತ್ಸಾಹಿ ಯುವಕನೊಬ್ಬ ತಾನು ತೆಗೆದ ಚಿತ್ರವೂ ಪ್ರದರ್ಶನದಲ್ಲಿದೆ; ಡ್ರೋನ್ ಕ್ಯಾಮೆರಾವನ್ನು ಹಕ್ಕಿಯ ಗೂಡಿನ ತೀರಾ ಸಮೀಪಕ್ಕೆ ಕಳಿಸಿ ತೆಗೆದದ್ದಾಗಿ ತನ್ನ ಜೊತೆ ಬಂದಿದ್ದವರಿಗೆ ಉತ್ಸಾಹದಿಂದ ವಿವರಿಸುತ್ತಿದ್ದ. ಅದನ್ನು ಕೇಳಿಸಿಕೊಂಡ ನಡು ವಯಸ್ಕರೊಬ್ಬರು, ‘ಹಾಗೆಲ್ಲಾ ಡ್ರೋನ್ ಬಳಸಿ ಫೋಟೊ ತೆಗೆದರೆ ಪಕ್ಷಿಗಳಿಗೆ, ಮರಿಗಳಿಗೆ ತೊಂದರೆಯಾಗೋದಿಲ್ವ? ಟೆಕ್ನಾಲಜಿ ಇದೆ ಅಂತ ಹೇಗ್ಹೇಗೋ ಬಳಸಬಾರದು. ನಿಮಗೆಲ್ಲಾ ಇದು ಯಾಕೆ ಅರ್ಥವಾಗೊಲ್ಲ’ ಎಂದು ರೇಗಿಯೇ ಬಿಟ್ಟರು. ‘ಡ್ರೋನ್ ಬಳಸಿ ವೈಲ್ಡ್‌ಲೈಫ್ ರಿಸರ್ವ್‌ಗಳಲ್ಲಿ ಕನ್ಸರ್ವೇಶನ್ ನಡೀತಿದೆ, ಅರಣ್ಯ ಇಲಾಖೆಯವರೇ ಬಳಸ್ತಿದಾರೆ, ನಾನು ಶೂಟ್ ಮಾಡಿ ಫೋಟೊ ತೆಗೆದ್ರೆ ತಪ್ಪಾ?’ ಎಂದು ವಾದಕ್ಕೆ ಬಿದ್ದ ಯುವಕ – ‘ನಾನೂ ಕೂಡ ನೇಚರ್ ಲವರ್‍ರೇ. ಟೆಕ್ನಾಲಜಿ ಇರೋದೇ ಬಳಸೋದಕ್ಕೆ’ ಎಂದು ಟಾಂಗು ಕೊಟ್ಟ. ಪ್ರದರ್ಶನದ ಸಂಘಟಕರು ಮಧ್ಯ ಪ್ರವೇಶಿಸಿದರು. ‘ನಿಮ್ಮಿಂದ ಬೇರೆಯವರಿಗೆ ತೊಂದ್ರೆಯಾಗ್ತಿದೆ, ಸೈಲೆನ್ಸ್ ಮೇಂಟೇನ್ ಮಾಡಿ’ ಎಂದು ಎಚ್ಚರಿಸಿದಾಗ ಇಬ್ಬರೂ ಸುಮ್ಮನಾದಂತೆ ನಟಿಸಿದರೂ, ಗೊಣಗೊಣ ಮುಂದುವರಿದೇ ಇತ್ತು.

ಅಭಿಪ್ರಾಯವೇನೇ ಇರಲಿ, ಇಬ್ಬರ ಮಾತಿನಲ್ಲೂ ಸತ್ಯವಿತ್ತು. ಡ್ರೋನ್‌ಗಳಷ್ಟೇ ಅಲ್ಲ, ಮಾರುಕಟ್ಟೆಗೆ ಬರುತ್ತಿರುವ ದೃಶ್ಯ ಮತ್ತು ಸೂಕ್ಷ್ಮ ಶಬ್ದಾಧಾರಿತ ತಂತ್ರಜ್ಞಾನ ಹೊಂದಿರುವ ಸಲಕರಣೆಗಳೆಲ್ಲಾ ಅಪರೂಪದ ಸಸ್ಯ–ಪ್ರಾಣಿ– ಪಕ್ಷಿ–ಜಲಚರ ಪ್ರಭೇಧಗಳ ಪತ್ತೆ, ವೀಕ್ಷಣೆ, ರಕ್ಷಣೆ, ಸಂರಕ್ಷಣೆಗೆ ಬಳಕೆಗೊಳ್ಳುತ್ತಿವೆ. ಸರ್ವೇಕ್ಷಣೆ, ಗಣತಿ, ನಿಗಾ, ಕಳ್ಳಬೇಟೆ, ಒತ್ತುವರಿ, ಮರಕಡಿತ, ಮಾರಾಟ ಜಾಲ, ಕಾಡ್ಗಿಚ್ಚು ಪತ್ತೆ, ದಾಳಿ ಪ್ರಕರಣಗಳ ಪತ್ತೆ ಕಾರ್ಯಕ್ಕೆ, ಸಂದೇಶ ರವಾನೆಗೆ ಬಳಕೆಗೊಳ್ಳುವುದು ಶುರುವಾಗಿ ಸುಮಾರು ಮೂರು ದಶಕಗಳೇ ಕಳೆದಿವೆ. ಅಳಿವಿನಂಚಿಗೆ ಸರಿಯುತ್ತಿರುವ ಪ್ರಾಣಿ ಪ್ರಭೇಧಗಳ ಜೀವನಕ್ರಮ ಅಭ್ಯಸಿಸಲು, ಸಂಖ್ಯೆ ಪತ್ತೆ ಹಚ್ಚಲು, ರಕ್ಷಿಸಲು ಹಲವು ತಂತ್ರಜ್ಞಾನ ಬಳಸುತ್ತಿರುವ ಸಂರಕ್ಷಣಾ ತಜ್ಞರು, ಸಂಶೋಧಕರು, ಸರ್ಕಾರಗಳು ಅಪರೂಪದ ಸಂತತಿ ರಕ್ಷಣೆಯಲ್ಲಿ ಯಶಸ್ಸನ್ನೂ ಕಂಡಿದ್ದಾರೆ.

ಭೂಮಿಯನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಮಾನವ ಸಂತತಿಯನ್ನು ಉಳಿಸಿಕೊಳ್ಳಲು ಇತರ ಜೀವಿಸಂಕುಲವನ್ನು ರಕ್ಷಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಇರುವುದರಿಂದ, ಲಭ್ಯವಿರುವ ಎಲ್ಲ ಮಾದರಿ ಮತ್ತು ಕ್ರಮಗಳನ್ನು ಬಳಸಲು ಪಣತೊಟ್ಟಿರುವ ವಿಶ್ವಮಟ್ಟದ ಸಂರಕ್ಷಣಾ ತಂಡಗಳಾದ ‘ವಿಶ್ವವ್ಯಾಪಿ ವನ್ಯಜೀವಿ ನಿಧಿ’, ನ್ಯೂಯಾರ್ಕಿನ ‘ವೈಲ್ಡ್‌ಲೈಫ್ ಕನ್ಸರ್ವೇಶನ್ ಸೊಸೈಟಿ’, ‘ಗ್ಲೋಬಲ್ ಟೈಗರ್ ಪ್ರೋಟೋಕಾಲ್’ ಮತ್ತು ನಮ್ಮ ‘ನ್ಯಾಶನಲ್ ಟೈಗರ್ ಕನ್ಸರ್ವೇಶನ್ ಅಥಾರಿಟಿ’, ‘ವೈಲ್ಡ್‌ಲೈಫ್ ಫಸ್ಟ್’, ‘ಸೆಂಟರ್ ಫಾರ್ ಎನ್ವಿರಾನ್‌ಮೆಂಟಲ್ ಸ್ಟಡೀಸ್’, ‘ಸೆಂಟರ್ ಫಾರ್ ವೈಲ್ಡ್‌ಲೈಫ್ ಸ್ಟಡೀಸ್’ನ ಸಂಶೋಧನಾ ತಜ್ಞರು, ಮತ್ತು ಭಾರತದ ಎಲ್ಲಾ ಹುಲಿ ಸಂರಕ್ಷಿತ ವಲಯಗಳ ಅರಣ್ಯ ಇಲಾಖೆಯ ಅಧಿಕಾರಿಗಳು ಲಭ್ಯವಿರುವ ಡಿಜಿಟಲ್ ತಂತ್ರಜ್ಞಾನದ ಸಮರ್ಥ ಬಳಕೆಮಾಡಿ ನಮ್ಮ ವನ್ಯಜೀವಿ ಆವಾಸ ಮತ್ತು ಜೀವಸಂಕುಲಗಳನ್ನು ಕಳ್ಳಬೇಟೆ, ಒತ್ತುವರಿದಾರರಿಂದ ಬಹುಪಾಲು ರಕ್ಷಿಸುತ್ತಿದ್ದಾರೆ. ಆದರೆ ಬೇಟೆ, ಕಾಡ್ಗಿಚ್ಚು, ಅಂಗಾಂಗ, ಚರ್ಮ, ಮಾಂಸ ಮಾರಾಟ, ಕಳ್ಳ ಸಾಗಣೆಯ ಪ್ರಕರಣಗಳು ದೇಶದಾದ್ಯಂತ ವರದಿಯಾಗುತ್ತಲೇ ಇವೆ.

ಕೋವಿಡ್ ಪಿಡುಗಿನಿಂದ ಲಾಕ್‌ಡೌನ್ ಆದಾಗ ದೇಶದಾದ್ಯಂತ ಬೀದಿ ಬದಿಯ ಮಾಂಸದಂಗಡಿಗಳಲ್ಲಿ ಮಾಂಸ ಮಾರಾಟ ನಿಂತುಹೋಗಿತ್ತು. ಪೊಲೀಸು ಇಲಾಖೆ ಸಾರ್ವಜನಿಕ ಯೋಗಕ್ಷೇಮದಲ್ಲಿ ತೊಡಗಿತ್ತು. ಜನರ ಬೇಕಾಬಿಟ್ಟಿ ವರ್ತನೆ ತಡೆಯಲು ಅರಣ್ಯ ಇಲಾಖೆಯ ಅಧಿಕಾರಿಗಳನ್ನೂ ಕೋವಿಡ್ ಸೇವೆಗೆ ನಿಯೋಜಿಸಲಾಗಿತ್ತು. ಇದರ ದುರುಪಯೋಗ ಪಡೆದುಕೊಂಡ ಸ್ಥಳೀಯ ಬೇಟೆಗಾರರು ಜಿಂಕೆ, ಮೊಲ, ಕಾಡುಹಂದಿಗಳನ್ನು ಬೇಟೆಯಾಡಿ ತಿಂದು ತೇಗಿದ್ದಲ್ಲದೆ, ಮಾರಾಟವನ್ನೂ ಮಾಡಿ ಹಣ ಸಂಪಾದಿಸಿದರು. ಇದರಿಂದ ತೀವ್ರ ಬೇಸರಗೊಂಡ



## ವನ್ಯಜೀವಿ ಸಂರಕ್ಷಣೆಯಲ್ಲಿ ತಂತ್ರಜ್ಞಾನ ಬಳಸುವ ಕೆಲವು ಪ್ರಮುಖ ಸರ್ಕಾರೇತರ ಸಂಸ್ಥೆಗಳು

1. ವೈಲ್ಡ್‌ಲೈಫ್ ಪ್ರೊಟೆಕ್ಷನ್ ಸೊಸೈಟಿ ಆಫ್ ಇಂಡಿಯಾ (WPSI)
2. ವೈಲ್ಡ್‌ಲೈಫ್ ಎಸ್‌ಓಎಸ್ (WSOS)
3. ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ (WWF), ಭಾರತ
4. ಆರಣ್ಯಕ್ ಅಂಡ್ ಹರ್ಗಿಲಾ ಆರ್ಮಿ
5. ವೈಲ್ಡ್‌ಲೈಫ್ ಟ್ರಸ್ಟ್ ಆಫ್ ಇಂಡಿಯಾ (WTI)
6. ವೈಲ್ಡ್‌ಲೈಫ್ ಕನ್ಸರ್ವೇಶನ್ ಸೊಸೈಟಿ (WCS) – ಭಾರತ
7. ರೈನೊ ಕನ್ಸರ್ವೇಶನ್ ಆಫ್ ಇಂಡಿಯಾ, ಅಸ್ಸಾಂ
8. ಸಹ್ಯಾದ್ರಿ ನಿಸರ್ಗ ಮಿತ್ರ (SNM)
9. ವೈಲ್ಡ್‌ಕ್ಯಾಟ್ – ಸಿ – ಚಿಕ್ಕಮಗಳೂರು
10. ವೈಲ್ಡ್‌ಲೈಫ್ ಫಸ್ಟ್ – ಬೆಂಗಳೂರು
11. ನೇಚರ್ ಕನ್ಸರ್ವೇಶನ್ ಫೌಂಡೇಶನ್ – ಬೆಂಗಳೂರು
12. ಸಿಮುಲ್ತಲಾ ಕನ್ಸರ್ವೇಶನ್ ಗ್ರೂಪ್, ವೆಸ್ಟ್‌ಬೆಂಗಾಲ್
13. ಕನ್ಸರ್ವೇಶನ್ ಇಂಡಿಯ – ಬೆಂಗಳೂರು
14. ಬನ್ನೇರುಘಟ್ಟ ನೇಚರ್ ಕನ್ಸರ್ವೇಶನ್ ಟ್ರಸ್ಟ್ – ಬೆಂಗಳೂರು
15. ವನೋದಯ – ಬೆಂಗಳೂರು
16. ಪ್ರೊವೈಲ್ಡ್‌ರ್‌ನೆಸ್ – ಬೆಂಗಳೂರು
17. ಕೆನೆತ್ ಆಂಡರ್‌ಸನ್ ನೇಚರ್ ಸೊಸೈಟಿ (CANS) – ಬೆಂಗಳೂರು
18. ಸೆಂಟರ್ ಫಾರ್ ವೈಲ್ಡ್‌ಲೈಫ್ ಸ್ಟಡೀಸ್ – ಬೆಂಗಳೂರು